


ಕೊಲ್ಲಾರಿ ಗಾಡಿಯ ಬಿಡಾರಗಳು




ನೀರಿಗಾಗಿ ಪರದಾಟ





## ಚಕ್ಕಡಿ ಗಾಡಿಗಳ ಸಾಲು

ರಾಜ್ಯದ ವಿವಿಧ ಜಿಲ್ಲೆಗಳಿಂದ ಹಾಗೂ ಮಹಾರಾಷ್ಟ್ರ, ಗೋವಾ, ಆಂಧ್ರಪ್ರದೇಶ, ತಮಿಳುನಾಡು ರಾಜ್ಯಗಳಿಂದಲೂ ಅಪಾರ ಸಂಖ್ಯೆಯಲ್ಲಿ ಭಕ್ತರು ಬರುತ್ತಿದ್ದಾರೆ. ಸುತ್ತಮುತ್ತಲಿನ ಹಳ್ಳಿಯವರು, ವಿವಿಧ ಜಿಲ್ಲೆಗಳವರು ಮಾತ್ರವೇಕೆ ಮಹಾರಾಷ್ಟ್ರದಿಂದಲೂ ಚಕ್ಕಡಿ ಗಾಡಿಗಳಲ್ಲಿ ಬರುವವರೂ ಉಂಟು! ಯಲ್ಲಮ್ಮನಿಗೆ ಜೈಕಾರ ಹಾಕುತ್ತಿರುವ ಭಕ್ತರಿಂದ ತುಂಬಿರುವ, ಸಾಲಾಗಿ ಬರುವ ಚಕ್ಕಡಿಗಳನ್ನು ಕಣ್ತುಂಬಿಕೊಳ್ಳುವುದೇ ಒಂದು ಸೊಗಸು. ಮೂರ್ನಾಲ್ಕು ದಿನಗಳವರೆಗೆ ಚಕ್ಕಡಿ ಪಯಣ ಕೆಲವರಿಗೆ ಖುಷಿ; ಹಲವರಿಗೆ ಸಂಪ್ರದಾಯ! ಮನೆ–ಮಂದಿಯೆಲ್ಲರೂ ಸೇರಿ ಕಾಲ ಕಳೆಯಲೊಂದು ಅವಕಾಶ.

ಕಡುಬು, ಹೋಳಿಗೆ, ಕರ್ಚಿಕಾಯಿ, ವಡೆ ಮೊದಲಾದ ಆಹಾರ ಪದಾರ್ಥಗಳನ್ನು ತಯಾರಿಸಿ, ಹಡ್ಡಲಗಿ (ಪರಡಿ) ತುಂಬಿಸಿ ದೇವಿಗೆ ನೈವೇದ್ಯ ಅರ್ಪಿಸುತ್ತಾರೆ. ಗುಡ್ಡದ ಪರಿಸರದಲ್ಲಿ ಹೋಳಿಗೆ, ಕಡಬಿನ ಘಮಲಿನೊಂದಿಗೆ 'ಭಕ್ತಿ ಉತ್ಸವ' ಮೇಳೈಸುತ್ತಿದೆ. ಜೋಗತಿಯರ ಸಹಾಯದಿಂದ ಹಡ್ಡಲಗಿ ತುಂಬಿಸಿ ದೇವರಿಗೆ ನೈವೇದ್ಯ ಅರ್ಪಿಸಿ, ಇಷ್ಟಾರ್ಥಗಳನ್ನು ಪೂರೈಸುವಂತೆ ಭಕ್ತರು ಪ್ರಾರ್ಥಿಸುವುದು ಸಂಪ್ರದಾಯ. ಜೋಗತಿಯರು ಜಗ (ದೇವರ ಮೂರ್ತಿ) ಹೊತ್ತು ಕುಣಿಯುತ್ತಾರೆ.

ಭಕ್ತರು ದೇಗುಲಕ್ಕೆ ಭಂಡಾರ ತೂರಿ ಪ್ರಾರ್ಥಿಸುತ್ತಾರೆ. ಹೀಗಾಗಿ, ಎಲ್ಲರೂ ಭಂಡಾರದಲ್ಲಿ ಮಿಂದೇಳುವವರೇ. ಆವರಣವೆಲ್ಲವೂ ಹೊನ್ನಿನ ಬಣ್ಣದಿಂದ ಕಂಗೊಳಿಸುತ್ತಿದೆ.

ಮಕ್ಕಳಿಲ್ಲದವರು, ದೇಗುಲದ ಆವರಣದಲ್ಲಿರುವ ಪರಶುರಾಮನ ತೊಟ್ಟಿಲು ತೂಗುವ ಹರಕೆ ಹೊತ್ತುಕೊಳ್ಳುತ್ತಾರೆ. ಇದರಿಂದ, ಸಂತಾನ ಭಾಗ್ಯ ಸಿಗುತ್ತದೆ ಎಂಬ ನಂಬಿಕೆ ಇದೆ. ಹಲವರು ದಂಪತಿ ಸಮೇತ ಬಂದು ಪ್ರಾರ್ಥಿಸುತ್ತಾರೆ; ಹರಕೆ ತೀರಿಸಿ ಧನ್ಯತಾ ಭಾವ ಮೆರೆಯುತ್ತಾರೆ.

ಯಲ್ಲಮ್ಮ ಭಕ್ತರ ಮನದಲ್ಲಿ ಶಕ್ತಿದೇವತೆಯಾಗಿ ನೆಲೆಯೂರಿರುವುದರಿಂದ, ಈ ಕ್ಷೇತ್ರ ದಕ್ಷಿಣ ಭಾರತದ ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾಗಿದೆ. ವರ್ಷದಿಂದ ವರ್ಷಕ್ಕೆ ಭಕ್ತರ ಸಂಖ್ಯೆ ಹೆಚ್ಚಾಗುತ್ತಿದೆ.

ಉಧೋ... ಉಧೋ... ಯಲ್ಲಮ್ಮ ನಿನ್ಹಾಲ್ಕ ಉಧೋ...